# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 13.06.2019 ರಂದು ಮಧ್ಯಾಹ್ನ 12.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ವಿದ್ಯಾಶಂಕರ್ ಎಸ್. ಇವರ ಅಧ್ಯಕ್ಷತೆಯಲ್ಲಿ ನಡೆದ 10ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ವಿದ್ಯಾಶಂಕರ್ ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

13/6/19
ಕುಲಸಚಿವರು

ಕುಲಪತಿಗಳು
13/06

ವಿಷಯ ಸಂಖ್ಯೆ : 10:01

ವಿಷಯ : ವಿಶ್ವವಿದ್ಯಾನಿಲಯದಲ್ಲಿ 2004-2005 ರಿಂದ 2012-13ರ ಶೈಕ್ಷಣಿಕ ಸಾಲಿನವರೆಗೆ ವಿವಿಧ ಪದವಿಗಳಿಗೆ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿರುವ/ ಪರೀಕ್ಷೆ ತೆಗೆದುಕೊಳ್ಳದ ವಿದ್ಯಾರ್ಥಿಗಳಿಗೆ ಒಂದು ಬಾರಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡುವ ಬಗ್ಗೆ.

******

ವಿಶ್ವವಿದ್ಯಾನಿಲಯದಲ್ಲಿ 2004-05ರಿಂದ 2012-13ರ ಶೈಕ್ಷಣಿಕ ಸಾಲಿನವರೆಗೆ ವಿವಿಧ ಶಿಕ್ಷಣಕ್ರಮಗಳಲ್ಲಿ ವ್ಯಾಸಂಗ ಮಾಡಿ, ಅನುತ್ತೀರ್ಣಗೊಂಡಿದ್ದು, ಕೆಲವು ಪತ್ರಿಕೆಗಳನ್ನು ಬಾಕಿ ಉಳಿಸಿಕೊಂಡಿರುವ ಸರಿಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಒಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ವಿದ್ಯಾರ್ಥಿಗಳ ಪಟ್ಟಿಯನ್ನು **ಅನುಬಂಧ "ಅ"** ರಲ್ಲಿ ಲಗತ್ತಿಸಿದೆ.

ಈ ಹಿಂದೆ **ಸ್ನಾತಕ ಪದವಿಗೆ 2001 ರಿಂದ 2007-08ನೇ** ಸಾಲಿನವರೆಗೆ ಪ್ರವೇಶಾತಿ ಹೊಂದಿದ್ದ ವಿದ್ಯಾರ್ಥಿಗಳಿಗೆ (**ಸುತ್ತೋಲೆ ದಿನಾಂಕ: 20-03-2008ರ** ಪ್ರಕಾರ) ಪದವಿ ಪೂರ್ಣಗೊಳಿಸಿಕೊಳ್ಳದೇ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಸದರಿ ಪರೀಕ್ಷಾ ಸುತೋಲೆಯ (Notification) ಪ್ರತಿಯನ್ನು **ಅನುಬಂಧ "ಆ"** ಲಗತ್ತಿಸಿದೆ. **ಸ್ನಾತಕೋತ್ತರ ಪದವಿಯ ಶಿಕ್ಷಣಕ್ರಮಗಳಿಗೆ 1996-97ರಿಂದ 2003-04ರ** ಸಾಲಿನವರೆಗಿನ ವಿದ್ಯಾರ್ಥಿಗಳಿಗೆ **ಸುತ್ತೋಲೆ ದಿನಾಂಕ: 19.02.2009ರ** ಪ್ರಕಾರ ಪದವಿ ಪೂರ್ಣಗೊಳಿಸಿಕೊಳ್ಳದೇ ಇರುವ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿತ್ತು. ಸದರಿ ಸುತೋಲೆಯ (Notification) ಪ್ರತಿಯನ್ನು **ಅನುಬಂಧ "ಇ"** ಲಗತ್ತಿಸಿದೆ.

ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳು ಈ ರೀತಿ ಹಳೆಯ ವಿದ್ಯಾರ್ಥಿಗಳಿಗೆ ಕಡೆಯ ಒಂದು ಅವಕಾಶವನ್ನು ನೀಡಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಅಧಿಸೂಚನೆಯ ಪ್ರತಿಯನ್ನು **ಅನುಬಂಧ "ಈ"** ರಲ್ಲಿ ಲಗತ್ತಿಸಿದೆ.

ಕರಾಮುವಿ ನಿಲಯದಲ್ಲಿಯೂ ಸಹ ಎಲ್ಲಾ ಶಿಕ್ಷಣಕ್ರಮಗಳ (ಬಿ.ಎ./ಬಿಕಾಂ, ಎಂ.ಎ/ಎಂ.ಕಾಂ, ಬಿ.ಲಿಬ್.ಐ.ಎಸ್ಸಿ, ಎಂಲಿಬ್ಐಎಸ್ಸಿ, ಬಿ.ಎಡ್ & ಎಂ.ಎಡ್ ಇತ್ಯಾದಿ) ವಿದ್ಯಾರ್ಥಿಗಳಿಗೆ, ಪ್ರಸ್ತುತ ಪರೀಕ್ಷೆ ಬರೆಯಲು ಒಂದು ಬಾರಿ ಕಡೆಯ ಅವಕಾಶವನ್ನು ನೀಡಿದ್ದಲ್ಲಿ, ವಿದ್ಯಾರ್ಥಿಗಳಿಗೆ ಉದ್ಯೋಗವಕಾಶ, ಬಡ್ತಿ ಇತ್ಯಾದಿ ಅವಶ್ಯಕತೆಗೆ ಅನುಕೂಲವಾಗಬಹುದು.

ಇದಲ್ಲದೆ 2010-11 ನಂತರದ ಪದವಿಯ ಎರಡು ಪಟ್ಟು ಕಾಲಾವಕಾಶದ (double the duration) ಅವಧಿ ಮುಕ್ತಾಯವಾಗಿರುವ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು UGC ಮಾನ್ಯತೆ ಗೊಂದಲದಿಂದ 2013-14ರ ನಂತರ ಪರೀಕ್ಷೆ ನಡೆದಿದ್ದ ಅವಧಿಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗಿಲ್ಲದಿರಬಹುದು. ಇಂತಹ ಹಳೆಯ ವಿದ್ಯಾರ್ಥಿಗಳಿಗೂ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟರೆ ಸೂಕ್ತವಾಗಬಹುದು. **ವಿಶೇಷವಾಗಿ ಅವಕಾಶ ನೀಡಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪ್ರಸ್ತುತ ಚಾಲ್ತಿ ಇರುವ ಶುಲ್ಕದ ಎರಡರಿಂದ ಮೂರರಷ್ಟು ಮೊತ್ತವನ್ನು ನಿಗದಿಪಡಿಸಲು ಕೋರಲಾಗಿದೆ.**

ಈ ವಿದ್ಯಾರ್ಥಿಗಳಿಗೆ ಅವರವರ ಪಠ್ಯಕ್ರಮ (Syllabus), ಯೋಜನೆ (Scheme) ಗಳಿಗೆ ಅನುಗುಣವಾಗಿ ಪರೀಕ್ಷೆ ನಡೆಸಬೇಕಾಗಿರುವುದರಿಂದ ಪರೀಕ್ಷಾ ಮಂಡಳಿ (BOE) ಮುಖಾಂತರ ಪ್ರಶ್ನೆಪತ್ರಿಕೆ ರಚನೆ (Question Paper setting) ಗೆ ಸಮಯಾವಕಾಶ ತೆಗೆದುಕೊಳ್ಳುವುದರಿಂದ, ಈ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ 2018-19ರ ಸಾಲಿನ ಎಲ್ಲಾ ವಾರ್ಷಿಕ/ಸೆಮಿಸ್ಟರ್ ಪರೀಕ್ಷೆ ಮುಗಿದ ನಂತರ ವೇಳಾಪಟ್ಟಿ (Time Table) ಸಿದ್ಧಪಡಿಸಿಕೊಂಡು ಕೇಂದ್ರ ಕಛೇರಿಯಲ್ಲಿಯೇ ಪರೀಕ್ಷೆ ನಡೆಸಬಹುದಾಗಿದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಸದರಿ ವಿಷಯವನ್ನು 10ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ, ನಿರ್ಣಯಕ್ಕಾಗಿ ಮತ್ತು ಅನುಮೋದನೆಗೆ ಮಂಡಿಸಿದೆ.

13/6/19

ಕುಲಸಚಿವರು

ಕುಲಪತಿಗಳು

13/06.

ತೀರ್ಮಾನ : ಯುಜಿಸಿ ದೂರಶಿಕ್ಷಣ ನಿಯಮಾವಳಿಗಳು–2017ರ ಪ್ರಕಾರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು N+2 ಅವಧಿಯಲ್ಲಿ ಕೋರ್ಸ್‌ಗಳನ್ನು ಮುಕ್ತಾಯಗೊಳಿಸಿಕೊಳ್ಳಬೇಕಾಗುತ್ತದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ 2004–05 ರಿಂದ 2012–13ರವರೆಗೆ ಮಾತ್ರ (2013–14 ಮತ್ತು 2014–15 ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿರುವ/ಪರೀಕ್ಷೆ ತೆಗೆದುಕೊಳ್ಳದ ವಿದ್ಯಾರ್ಥಿಗಳು ದೂರಶಿಕ್ಷಣ ಮಂಡಳಿ, ನವದೆಹಲಿ, ಇವರ ನಿಯಮಾವಳಿಗಳಡಿಯಲ್ಲಿ ಬರುತ್ತಿದ್ದು, ಮಾನವೀಯತೆ ದೃಷ್ಟಿಯಿಂದ ಅಂತಹ ವಿದ್ಯಾರ್ಥಿಗಳು ಕೋರ್ಸ್‌ಗಳನ್ನು ತಾರ್ಕಿಕವಾಗಿ ಮುಕ್ತಾಯಗೊಳಿಸಲು ಒಂದು ಕಡೆಯ ಅವಕಾಶವನ್ನು ಕಲ್ಪಿಸಿಕೊಡಲು ನಿರ್ಣಯಿಸಲಾಯಿತು. ಸದರಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆದ ನಿಯಮಾವಳಿಗಳ ಪ್ರಕಾರ ಪರೀಕ್ಷೆಗಳನ್ನು ಮೈಸೂರು ಕೇಂದ್ರದಲ್ಲಿ ಮಾತ್ರ ನಡೆಸಲು ಶಿಫಾರಸ್ಸು ಮಾಡಿತು.

----

ವಿಷಯ ಸಂಖ್ಯೆ : 10:02

ವಿಷಯ: ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯದ ಬಗೆಗೆ.

*****

ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ 2019–20ನೇ ಸಾಲಿನಲ್ಲಿ ನಡೆಯುವ ಸ್ನಾತಕ, ಸ್ನಾತಕೋತ್ತರ, ಡಿಪ್ಲೋಮ, ಪ್ರವೇಶ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಕೊಳ್ಳಬೇಕಿರುತ್ತದೆ.

ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: PWD 433 FC-3/2003 ದಿನಾಂಕ: 19.08.2019 ರಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸುವ ಸಂಬಂಧವಾಗಿ ಕೆ.ಟಿ.ಪಿ.ಪಿ ನಿಯಮ 4(ಜಿ) ಯಿಂದ ವಿನಾಯಿತಿ ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕ್ರಮಗಳ ಪ್ರಶ್ನೆಪತ್ರಿಕೆಗಳನ್ನು ರಹಸ್ಯ ಮುದ್ರಣ ಕಾರ್ಯನಡೆಸುವ ಮುದ್ರಕರನ್ನು ಗುರುತಿಸಿ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಕೊಳ್ಳುವ ಬಗ್ಗೆ ಅಗತ್ಯ ಚರ್ಚೆ ಮತ್ತು ನಿರ್ಣಯಕ್ಕಾಗಿ 10ನೇ ವಿಶೇಷ ಶೈಕ್ಷಣಿಕ ಸಭೆಗೆ ವಿಷಯವನ್ನು ಮಂಡಿಸಿದೆ.

ತೀರ್ಮಾನ : ವಿಷಯಸಂಖ್ಯೆ : 10.02ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಹೊರಡಿಸಿರುವ ಅಧಿಸೂಚನೆ **No.PWD 433FC-3/2003,** ದಿನಾಂಕ: **19.08.2003**ರ ಆದೇಶವನ್ನು ಅಳವಡಿಸಿಕೊಂಡು ಕ್ರಮವಹಿಸಲು ನಿರ್ಣಯಿಸಲಾಯಿತು.

---

ಅಂತಿಮವಾಗಿ 10ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

13/6/19

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು
13/06